ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನ ಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್, ತಹಶೀಲ್ದಾರರು ಹೂವಿನ ಹಡಗಲಿ

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ರಾಮಾನಾಯ್ಕ ತಂದೆ ಲೇಟ್ ನೂರ್ಯಾನಾಯ್ಕ, ಕಾಲ್ವಿ.<br>ಪೀರ್ಯಾನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ.<br>ವಾಲ್ಯನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ. | ಎಸ್ ಹೋಬ್ಯಾನಾಯ್ಕ ತಂದೆ ಲೇಟ್ ಸಾಣ್ಯಾನಾಯ್ಕ ಕಾಲ್ವಿ |

## ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಕಾಲ್ವಿ | 247B 403A/1 | 2.94 1.15 |

ಪಿಠೀಕೆ

ಮೇಲಿನ ದಾವಾ ಜಮೀನನ್ನು ವಾದಿಯಾದ ರಾಮಾನಾಯ್ಕ ತಂದೆ ಲೇಟ್ ನೂರ್ಯಾನಾಯ್ಕ, ಕಾಲ್ವಿ. ಪೀರ್ಯಾನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ. ವಾಲ್ಯನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ. ಇವರು ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಪಟ್ಟಾದಾರರಾದ ಲಂಬಾಣಿ ನೂರ್ಯನಾಯ್ಕ ತಂದೆ ನೇಮ್ಯಾನಾಯ್ಕ ಇವರು ದಿನಾಂಕ 16/06/2004ರಂದು ಮರಣ ಹೊಂದಿದ್ದು ಅವರ ವಾರಸುದಾರರ ಹಾಗೂ ವಾದಿಗಳು ತಮ್ಮ ಹೆಸರಿಗೆ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 ರನ್ವಯ ಅರ್ಜಿದಾರರ ಕೋರಿಕೆ ಮೇರೆಗೆ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಗಳು ನಿಗಧಿತ ಅವಧಿಯೊಳಗೆ ನಮೂನೆ-21ನ್ನು ಜಾರಿಮಾಡಿರುತ್ತಾರೆ. ನಿಗಧಿತ ಅವದಿಯೋಳಗೆ ಅಂದರೆ ದಿನಾಂಕ 20/05/2015 ರಂದು ಪ್ರತಿವಾದಿಯಾದ ಶ್ರೀ ಎಸ್ ಹೋಬ್ಯಾನಾಯ್ಕ ತಂದೆ ಲೇಟ್ ಸಾಣ್ಯಾನಾಯ್ಕ ಕಾಲ್ವಿ ಇವರು ದಾವಾದ ಜಮೀನಿನಲ್ಲಿ ತಮ್ಮ ಹಕ್ಕು ಇರುವುದಾಗಿ ತಿಳಿಸಿ ಹಕ್ಕು ಬದಲಾವಣೆ ಪ್ರಕರಣ ಸಂಖ್ಯೆ 60/2014-2015 ಕ್ಕೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ದಾವಾ ಜಮೀನಿನ ಹಕ್ಕು ಬದಲಾವಣೆಗೆ ತಮ್ಮ ಆಕ್ಷೇಪಣೆ ಇರುವುದಾಗಿ ಪ್ರತಿವಾದಿಗಳು ಆಕ್ಷೇಪಣಾ ಅರ್ಜಿ ಸಲ್ಲಿಸಿದ ಕಾರಣ ಈ ಪ್ರಕರಣವನ್ನು ವಿವಾದದಾಸ್ಪದವೆಂದು ಕಂದಾಯ ಪರಿವೀಕ್ಷಕರು ಹಡಗಲಿ ಇವರು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿ ಪ್ರಕರಣವನ್ನು ವಿವಾದಿತವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಾಲಂ 129ರ ಪ್ರಕಾರ ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆಯನ್ನು ದಿನಾಂಕ 12/05/2016 ರಂದು ಪ್ರಾರಂಭಿಸಲಾಯಿತು.

ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಹಾಜರಿದ್ದು ಹೇಳಿಕೆ ನೀಡಿರುತ್ತಾರೆ. ಅಂತೆಯೇ ದಿನಾಂಕ 13/10/2016 ರಂದು ನಡೆದ ವಿಚಾರಣೆ ವೇಳೆ ವಾದಿ-ಪ್ರತಿವಾದಿಗಳು ಹಾಜರಿದ್ದು, ಪ್ರತಿವಾದಿಯು ತಾವು ನೀಡಿದ ತಕರಾರು

ಅರ್ಜಿ ಹಿಂದಕ್ಕೆ ಪಡೆದಿದ್ದು, ಪ್ರತಿವಾದಿಗಳು ಸದರಿ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡಲು ತಮ್ಮ ಯಾವುದೆ ಆಕ್ಷೇಪಣೆ ಇರುವುದಿಲ್ಲವೆಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ವಾದಿ-ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ಪಟ್ಟಾದಾರರ ವಾರಸುದಾರರಿಗೆ ಪೋತಿವಾರಸ ಪ್ರಕಾರ ಪಟ್ಟಾದಾರರ ವಾರಸುದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡುವುದು, ಸಮಂಜಸವಾಗಿದ್ದು ಸದರಿ ಹಕ್ಕು ಬದಲಾವಣೆ ಮಾಡುವುದು ಯಾವುದೆ ತಕರಾರು ಇಲ್ಲವೆಂದು ವಿಚಾರಣೆ ವೇಳೆ ಹೇಳಿಕೆ ನೀಡಿದ್ದು ಕಾರಣ ಕೆಳಕಂಡ ಆದೇಶ

**ಸಂ/ಕಂ/ಪಹಣಿ /ವಿವಾದ/02/2015-16** **ದಿನಾಂಕ:-20/10/2016**

**ಆದೇಶ**

ಪಿಠೀಕೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ತಕರಾರುದಾರರ ಅರ್ಜಿಯನ್ನು ವಜಾಗೊಳಿಸಿ ಕಾಲ್ವಿ ಗ್ರಾಮದ ಸರ್ವೆ ನಂಬರ್ 247 B (ವಿ) 2.94, 403 A/1 (ವಿ) 1.15 ಎಕರೆ ಜಮೀನಿನಲ್ಲಿ ಸಲ್ಲಿಸಿರುವ ಪೋತಿವಾರಸ ಪ್ರಕಾರ ರಾಮಾನಾಯ್ಕ ತಂದೆ ಲೇಟ್ ನೂರ್ಯಾನಾಯ್ಕ, ಕಾಲ್ವಿ. ಪೀರ್ಯಾನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ. ವಾಲ್ಯನಾಯ್ಕ ತಂದೆ ಲೇಟ್ ನೂರ್ಯನಾಯ್ಕ, ಕಾಲ್ವಿ. ಇವರುಗಳ ಹೆಸರಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:- 20/10/2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ತಹಶೀಲ್ದಾರರು
ಹೂವಿನಹಡಗಲಿ

ಪ್ರತಿಯನ್ನು:-

1)ವಾದಿ/ಪ್ರತಿವಾದಿಗಳಿಗೆ ಹಾಗೂ ಅವರ ಪರ ವಕೀಲರಿಗೆ

2)ಗಣಕೀರಣ ಕೇಂದ್ರ ಶಾಖೆ ಶಿರಸ್ತೇದಾರರು ತಾಲೂಕ ಕಛೇರಿ ಹಡಗಲಿ ಇವರಿಗೆ

3)ಕಂದಾಯ ನೀರಿಕ್ಷಕರು ಹಡಗಲಿ ಇವರಿಗೆ

4)ಹೆಚ್ಚಿನ ಪ್ರತಿ ಕಛೇರಿ ಕಡತಕ್ಕೆ